3

# ಪರಸ್ಪರ ವ್ಯತ್ಯಾಸ ತೋರಿಸುವ ಮತ್ತು ಮುಕ್ತಾಯದ ಧಾರ್ಮಿಕ ಅಭಿಪ್ರಾಯ

# (17-25)

ಈ ಪತ್ರವು ಮುಕ್ತಾಯಗೊಳ್ಳುತ್ತಿರುವ ಹಾಗೆ, ಯೂದನು ಸುಳ್ಳುಬೋಧಕರು ಮತ್ತು ಮಾದರಿ ವರ್ತನೆಯ ಪರಸ್ಪರ ವ್ಯತ್ಯಾಸವನ್ನು ತೋರಿಸುತ್ತಾನೆ. ಕ್ರೈಸ್ತರು ದೇವರೊಂದಿಗೆ ತಮಗಿರುವ ಸಂಬಂಧದ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಅವರು ಅಪೊಸ್ತಲರ ಮಾತುಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಮತ್ತು ತಮ್ಮನ್ನು ತಾವು ಅತೀ ಪರಿಶುದ್ಧವಾದ ನಂಬಿಕೆಯೆಡೆಗೆ ರೂಪಿಸಿಕೊಳ್ಳಬೇಕು. ಅದೇ ಸಮಯದಲ್ಲಿ ಯಾರು ಆತ್ಮೀಕವಾಗಿ ಬಲಹೀನ ರಾಗಿರುತ್ತಾರೋ ಅವರಿಗೆ ಗಮನವನ್ನು ನೀಡಬೇಕು. ಅವರನ್ನು ಪ್ರೋತ್ಸಾಹಪಡಿಸಬೇಕು ಮತ್ತು ಕರ್ತನಿಗಾಗಿ ಅವರನ್ನು ತಿರುಗಿ ಪಡೆದುಕೊಳ್ಳಬೇಕು.

## ಪರಸ್ಪರ ವ್ಯತ್ಯಾಸ ತೋರಿಸುವ: ಭಿನ್ನಾಭಿಪ್ರಾಯ ಹುಟ್ಟಿಸುವ ಕುಚೋದ್ಯಗಾರರು ಪ್ರತಿ ಪ್ರಾಮಾ;ಕ ವಿಶ್ವಾಸಿಗಳು (17-23)

**17ಪ್ರಿಯರೇ ನೀವಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲರು ಮೊದಲು ಹೇಳಿದ ಮಾತುಗಳನ್ನು ಜ್ಞಾಪಕಮಾಡಿಕೊಳ್ಳಿರಿ. 18ಭಕ್ತಿಗೆ ವಿರುದ್ಧವಾದ ತಮ್ಮ ಆಶೆಗಳನ್ನು ಅನುಸರಿಸಿ ನಡೆಯುವ ಕುಚೋದ್ಯಗಾರರು ಅಂತ್ಯಕಾಲದಲ್ಲಿ ಇರುವರೆಂದು ಅವರು ನಿಮಗೆ ಹೇಳಿದರಲ್ಲಾ. 19ಇವರು ಭೇದಗಳನ್ನು ಉಂಟುಮಾಡುವವರೂ ಪ್ರಾಕೃತಮನುಷ್ಯರೂ ದೇವ ರಾತ್ಮವಿಲ್ಲದವರೂ ಆಗಿದ್ದಾರೆ. 20ಪ್ರಿಯರೇ, ನೀವಾದರೋ ನಿಮಗಿರುವ ಅತಿಪರಿಶುದ್ಧವಾದ ಕ್ರಿಸ್ತ ನಂಬಿಕೆಯನ್ನು ಆಧಾರಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ ಪವಿತ್ರಾತ್ಮಪ್ರೇರಿತರಾಗಿ ಪ್ರಾರ್ಥನೆಮಾಡುತ್ತಾ 21ನಿತ್ಯಜೀವಕ್ಕಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕರುಣೆಯನ್ನು ಎದುರುನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ. 22ಸಂದೇಹಪಡುವ ಕೆಲವರುಗೆ ಕರುಣೆಯನ್ನು ತೋರಿಸಿರಿ; 23ಅವರನ್ನು ಬೆಂಕಿಯ ಬಾಯೊಳಗಿಂದ ಎಳಕೊಂಡು ರಕ್ಷಿಸಿರಿ. ಕೆಲವರನ್ನು ಭಯಯುಕ್ತರಾಗಿ ಕರುಣಿಸಿರಿ; ಹೊಲಸುನಡತೆಯಿಂದ ಮೈಲಿಗೆಯಾದ ಅವರ ಅಂಗಿಯನ್ನೂ ಅಸಹ್ಯಿಸಿರಿ.**

**ವಚನ 17.** ಯೂದನು ತನ್ನ ಓದುಗರಿಗೆ ವಚನ 3ರಲ್ಲಿ ಮಾಡಿದಂತೆ ನೇರವಾಗಿ ಸಂಬೋಧಿಸಲು ಹಿಂದಿರುಗುತ್ತಾನೆ. ತನ್ನ ಓದುಗರನ್ನು "ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ನೀವು ಹೋರಾಡಬೇಕು" ಎಂದು ಎಚ್ಚರಿಸಿ (ವಚನ 3) ಮತ್ತು ಅಪೊಸ್ತಲರ ಮೂಲಕ ಕೊಟ್ಟಿರುವ ಕ್ರಿಸ್ತನ **ಮಾತುಗಳನ್ನು ಜ್ಞಾಪಕಮಾಡಿಕೊಳ್ಳಬೇಕೆಂದು** ಆತನ ಬೇಡಿಕೆಯಾಗಿದೆ. ಯೂದನು ಸಭೆಯನ್ನು ಎದುರಿಸುತ್ತಿರುವ ಸುಳ್ಳುಬೋಧಕರನ್ನು ವರ್ಣಿಸುತ್ತಾನೆ. ಲೇಖಕನ ಉದ್ದೇಶ ತನ್ನ ಓದುಗರನ್ನು ರೂಪಿಸುವದು ಮತ್ತು ಪ್ರೋತ್ಸಾಹಿಸುವದು ಆಗಿದೆ ಎಂಬುದು ಸ್ಪಷ್ಟವಾಗಿದೆ. ಪ್ರಾರಂಭದಲ್ಲಿ ಆತನು "ಸಾರ್ವಜನಿಕ ರಕ್ಷಣೆಯ" ಕುರಿತು ಬರೆಯುವದರ ಮೂಲಕ ಅವರನ್ನು ರೂಪಿಸಲು ಯೋಚಿಸಿದ್ದನು

(ವಚನ 3), ಆದರೆ ಆತನು ಅವರಿಗೆ ಬರೆಯುವದಕ್ಕೆ "ಕಳ್ಳತನದಿಂದ ಹೊಕ್ಕಿರುವ" (ವಚನ 4) ಸುಳ್ಳು ಬೋಧಕರಿಂದ ಎಚ್ಚರಿಸಲು ಮತ್ತು ತಿರುಗಿಸಲು ಒತ್ತಾಯ ಹೊಂದಿದನು. ಆತನು ಅವರ ಸಾರ್ವಜನಿಕ ರಕ್ಷಣೆಯ ಕುರಿತು ಬರೆದಿರಬಹುದು ಅಥವಾ ಸುಳ್ಳುಬೋಧಕರ ಕುರಿತು ಬರೆದಿರಬಹುದು ಆತನ ಉದ್ದೇಶ ಮಾತ್ರ ಕ್ರೈಸ್ತರನ್ನು ನಂಬಿಕೆಯಲ್ಲಿ ಬೆಳೆಸುವದಾಗಿತ್ತು.

ತಮ್ಮಲ್ಲಿ ಭಕ್ತಿಹೀನ ಮನುಷ್ಯರು ಮತ್ತು ಕ್ರಿಸ್ತನ ಬೋಧನೆಯನ್ನು ದುರುಪಯೋಗ ಪಡಿಸುವವರು ಉದ್ಭವಿಸುವಾಗ ಕ್ರೈಸ್ತರು ಆಶ್ಚರ್ಯಪಡಬೇಕಾಗಿಲ್ಲ ಎಂದು ಯೂದನು ಸ್ಪಷ್ಟಪಡಿಸುತ್ತಾನೆ. ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯಲ್ಲಿ ದೇವಜನರನ್ನು ಸೋಸಿತೆಗೆದ ಅವರನ್ನು ತಮ್ಮ ಸ್ವಪ್ರಯೋಜನಕ್ಕಾಗಿ ಉಪಯೋಗಿಸಿದ ಜನರ ಕತೆಗಳು ಪುನರಾವರ್ತಿತವಾಗಿವೆ. ಕ್ರಿಸ್ತನ ದೇಹವನ್ನು ತಮ್ಮ ವೈಯಕ್ತಿಕ ಕಾರ್ಯಪಟ್ಟಿಯ ಮುನ್ನಡೆಗಾಗಿ ಮತ್ತು ತಮಗೆ ಮಹಿಮೆಯನ್ನು ತರುವದಕ್ಕಾಗಿ ಉಪಯೋಗಿಸುವವರು ಯಾವಾ ಗಲೂ ಇರುತ್ತಾರೆ. ಯೂದನು ತನ್ನ ವಿಷಯವನ್ನು ಸಮರ್ಥಿಸಿಕೊಳ್ಳಲು **ಅಪೊಸ್ತಲರು** ಈ ಸಂಗತಿಯ ಕುರಿತಾಗಿ **ಮೊದಲೆ ಮಾತನಾಡಿದ್ದಾರೆ** ಎಂದು ಹೇಳುತ್ತಾನೆ. ಪೇತ್ರನು ಮಾಡಿದಂತೆ ಪೌಲನು ಪತ್ರಗಳನ್ನು ಉಲ್ಲೇಖಿಸುವದಕ್ಕೆ ಬದಲಾಗಿ (2 ಪೇತ್ರ 3:15, 16), ಯೂದನು ಎಲ್ಲಾ "ಅಪೊಸ್ತಲರಿಗೆ" ಸಾಮಾನ್ಯವಾಗಿರುವ ಬೋಧನೆಗಳನ್ನು ನಿವೇದಿಸುತ್ತಾನೆ.

**ನಮ್ಮ ಕರ್ತನಾದ ಯೇಸು ಕ್ರಿಸ್ತನು** "ಅಪೊಸ್ತಲರು" ಎಂದು ಹೇಳುವಾಗ ಯೂದನ ಮನಸ್ಸಿನಲ್ಲಿ ನಿರ್ಧಿಷ್ಟವಾಗಿ ಯಾರಿದ್ದರು ಎಂಬುದು ಖಚಿತವಾಗಿಲ್ಲ. ಆತನು ಯೇಸುವಿನ ಸಹೋದರರಲ್ಲಿ ಒಬ್ಬನಾಗಿರುವದರಿಂದ, ಯೂದನು ಹನ್ನೆರಡು ಜನರನ್ನು ತಿಳಿದವನಾಗಿದ್ದನು ಎಂದು ನಿರೀಕ್ಷಿಸಬಹುದು. ಪೌಲನು ಯೂದನ ಸಹೋದರನಾದ ಯಾಕೋಬನನ್ನು ಇನ್ನೊಂದು ರೀತಿಯಲ್ಲಿ "ಅಪೊಸ್ತಲನೆಂದು" ಉಲ್ಲೇಖಿಸುತ್ತಾನೆ (ಗಲಾತ್ಯ 1:19). ಯೂದನು ತನ್ನನ್ನು ಮತ್ತು ಯಾಕೋಬನನ್ನು ಅಪೊಸ್ತಲರ ಪಟ್ಟಿಯಲ್ಲಿ ಸೇರಿಸಿಕೊಂಡಿರಬಹುದೋ? ಲೂಕನು ಬಾರ್ನಬ ಮತ್ತು ಪೌಲರನ್ನು "ಅಪೊಸ್ತಲರೆಂದು" ಎರಡು ಸಾರಿ ಕರೆಯುತ್ತಾನೆ (ಅಪೊಸ್ತಲರ ಕೃತ್ಯಗಳು 14:4, 14). ಬಹುಶಃ ಅವನು ಅವರನ್ನು ಅಂತಿಯೋಕ್ಯ ಸಭೆಯ ಅಪೊಸ್ತಲರೆಂದು ಅರ್ಥೈಸಿರಬಹುದು. ಯೂದನು ಇತರರನ್ನು ಕರ್ತನಿಂದ ನೇರವಾಗಿ ಅಪೊಸ್ತಲರ ಅಧಿಕಾರವನ್ನು ಹೊಂದಿರುವ ಹನ್ನೆರಡು ಜನರನ್ನು ಹೊರತುಪಡಿಸಿ ಸೇರಿಸಿಕೊಂಡಿರಬಹುದು ಎಂಬುದು ಸ್ಪಷ್ಟವಾಗಿಲ್ಲ. ಯೂದನು ತನ್ನನ್ನು ತಾನು ಸಂಖ್ಯೆಯಲ್ಲಿ ಒಬ್ಬನನ್ನಾಗಿ ಪರಿಗಣಿಸದಿದ್ದರೂ ಸಹ ಅಪೊಸ್ತಲರ ಸಂದೇಶವನ್ನು ಪ್ರಸರಿಸುವವನ್ನಾಗಿ ಪರಿಗಣಿಸಿರಬಹುದು.

ಯೂದನ ಪ್ರಾರಂಭದ ಅಂಶವೆಂದರೆ "ಅಪೊಸ್ತಲರು" ಕ್ರೈಸ್ತ ಬೋಧನೆಯ ಅಧಿಕಾರಯುತ ಮೂಲವಾಗಿದ್ದರು. ಅಧಿಕಾರಹೊಂದಿದ ಬೋಧಕರಾಗಿರುವವರ ಸಾಮಾರ್ಥ್ಯದಲ್ಲಿ ಅವರು ಕನಿಷ್ಟ ಹತ್ತು ಮತ್ತು ಪೌಲನನ್ನು ಪರಿಗಣಿಸುತ್ತಿದ್ದರು (1 ಕೊರಿಂಥ 15:5-9). ನಾವು ಹನ್ನೆರೆಡು ಜನರ ಕಾರ್ಯಗಳ ಕುರಿತಾಗಿ ಸ್ವಲ್ಪ ಮಾತ್ರ ತಿಳಿದಿದ್ದೇವೆ. ಅವರಲ್ಲಿ ಪ್ರತಿಯೊಬ್ಬರು ವಿಸ್ತರಿತ ಸೇವೆಯನ್ನು ದೂರವರೆಗಿರುವ ಪ್ರಭಾವದೊಂದಿಗೆ ಹೊಂದಿರಬಹುದು ಆದರೆ ಈ ಕ್ಷಣದಲ್ಲಿ ಯೂದನ ಗಮನವು ಇತರ ಸಂಗತಿಗಳೆಡೆಗೆ ತಿರುಗಿದೆ. ಕರ್ತನ ಸಹೋದರನು ತನ್ನ ಓದುಗರು ಅಪೊಸ್ತಲ ಸಂದೇಶ ಒಂದಿದೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಬಯಸಿದ್ದನು. ಯೂದನು ಎದುರಿಸಿದ್ದ ಸುಳ್ಳುಬೋಧಕರು ಅಪೊಸ್ತಲರ ಸಂದೇಶದ ಪ್ರಾಮುಖ್ಯವಾದ ಅಂಶಗಳನ್ನು ಅಲ್ಲಗಳೆಯುತ್ತಿದ್ದರು. ಇದರಿಂದಾಗಿ ವಿಶ್ವಾಸಿಗಳ ರಕ್ಷಣೆಯು ವಿಪತ್ತಿನಲಿತ್ತು. ಸಭೆ ಏನನ್ನು ನಂಬುತ್ತಿತ್ತೋ ಅದು ಪರಿಗಣಿಸಲ್ಪಡುತ್ತಿತ್ತು; ಆದರೆ ಸಿದ್ಧಾಂತಗಳು ಪ್ರಾಮುಖ್ಯವಾಗಿದ್ದವು.

**ವಚನ 18.** ಯೂದನು **ಅವರು ನಿಮಗೆ ಹೇಳಿದರಲ್ಲಾ** ಎಂದು ಬರೆಯುವಾಗ ಅಪೊಸ್ತಲರು ವಿಷಯವಾಗಿದ್ದರು. ಕ್ರಿಸ್ತನ ಅಪೊಸ್ತಲರು ಅವರಿಗೆ ಸುಳ್ಳು ಬೋಧಕರ ಕುರಿತು

ಎಚ್ಚರಿಕೆಯನ್ನು ನೀಡುದ್ದರು. ಸುಳ್ಳುಬೋಧಕರು ಕ್ರೈಸ್ತ ಸಿದ್ಧಾಂತಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧರಾಗಿರುವದನ್ನು ಮತ್ತು ಅನೈತಿಕ ಮಾರ್ಗಗಳನ್ನು ಆಶ್ರಯಿಸುವದನ್ನು ನೋಡಿ ಯೂದನ ಓದುಗರು ಆಶ್ಚರ್ಯಪಡಲಿಲ್ಲ. ಅಪೊಸ್ತಲರು ಕ್ರೈಸ್ತರಿಗೆ ಅದು ಹೀಗೆ ಇರುತ್ತದೆ ಎಂದು ಬೋಧಿಸಿದ್ದರು.

ಯೂದನು ಅಪೊಸ್ತಲರಿಂದ ದೊರೆತ ವಿಶಿಷ್ಟವಾದ ಎಚ್ಚರಿಕೆಯನ್ನು ಸೂಚಿಸಲಿಲ್ಲ, ಆದರೆ ಒಡಂಬಡಿಕೆಯ ಹಲವು ಇವೆ. ಪೌಲನು "ಅಂತ್ಯದ ದಿನಗಳಲ್ಲಿ" ಬರುವ ಬೋಧಕರ ಕುರಿತು ಎಚ್ಚರಿಸುತ್ತಾನೆ (2 ತಿಮೋಥೆ 3:1-5; ನೋಡಿರಿ ಅಪೊಸ್ತಲರ ಕೃತ್ಯಗಳು 20:29-30; 1 ತಿಮೊಥೆ 4:1-3) ಮತ್ತು ಆತನು ಅವರನ್ನು ಯೂದನ ಪತ್ರಿಕೆಯಲ್ಲಿರುವ ಪದಗಳಂತಿರುವ ಪದಗಳಿಂದ ವರ್ಣಿಸುತ್ತಾನೆ. ಒಂದು ವೇಳೆ ಯೂದನು ಈ ಪತ್ರವನ್ನು ಪಂಚಾಶತ್ತಮದ ಘಟನೆಯ ನಂತರದ ಎರಡು ದಶಕಗಳಲ್ಲಿ ಬರೆದಿದ್ದಲ್ಲಿ, ಆತನು ಹೊಸ ಒಡಂಬಡಿಕೆಯ ಹಲವು ಎಚ್ಚರಿಕೆಯನ್ನು ನೀಡಿದ್ದಾರೆ. ಪೇತ್ರನ ಮಾತುಗಳು ಯೂದನ ಮಾತುಗಳಿಗೆ ಅತ್ಯಂತ ನಿಕಟವಾಗಿವೆ. "ಕಡೇ ದಿವಸಗಳಲ್ಲಿ ತಮ್ಮ ದುರಾಶೆಗಳ ಪ್ರಕಾರ ನಡೆಯುವ ಕುಚೋದ್ಯಗಾರರು ಬಂದು ಕುಚೋದ್ಯಮಾಡುತ್ತಾರೆ" (2 ಪೇತ್ರ 3:3).

**ಕುಚೋದ್ಯಗಾರರು** *(empaiktēs)* ಎಂಬ ಪದಕ್ಕೆ ಅನುವಾದಿಸಲಾದ ಗ್ರೀಕ್ ಪದ ಹೊಸ ಒಡಂಬಡಿಕೆಯಲ್ಲಿ 2 ಪೇತ್ರ 3:3 ಮತ್ತು ಯೂದ 18ರಲ್ಲಿ ಮಾತ್ರ ಕಂಡುಬರುತ್ತದೆ. ವಿವೇಚನೆ ಮತ್ತು ಸತ್ಯ ವಿಫಲವಾದಾಗ, ಧರ್ಮಶ್ರದ್ಧೆಯಿಲ್ಲದ ಕುಚೋದ್ಯಗಾರರ ಹಸ್ತದಲ್ಲಿ ಕುಚೋದ್ಯಮಾಡುವ ದಂಡ ಸಿದ್ಧವಾಗಿರುತ್ತದೆ. ಕುಚೋದ್ಯ, ಜಾಣತನದ ಪ್ರತಿಕಾರ, ಕುತಂತ್ರದ ತರ್ಕಗಳು ಲೌಕಿಕ ಮಾರ್ಗಗಳತ್ತ ಒಲವಿರುವವರಿಗೆ ಇಷ್ಟವಾಗುತ್ತದೆ. NASB "ಭಕ್ತಿ ಹಿನ" ಎಂಬ ಪದವನ್ನು ಸುಳ್ಳು ಬೋಧಕರಿಗೆ ವಚನ 15ರಲ್ಲಿ ನಾಲ್ಕು ಸಾರಿ ಉಪಯೋಗಿಸುತ್ತದೆ. ವಚನದಲ್ಲಿ ಯೂದನು **ತಮ್ಮ ಸ್ವಂತ ಭಕ್ತಿಹೀನ ದುರಾಶೆಯಲ್ಲಿ** ಎಂಬುದನ್ನು ಮತ್ತೇ ಜ್ಞಾಪಿಸಿಕೊಳ್ಳುತ್ತಾನೆ. ಆತನು ಈ ಬೋಧಕರನ್ನು ಅವರ ಭಕ್ತಿಹೀನತೆಗೆ ಎಚ್ಚರಿಕೆಯನ್ನು ನೀಡದೆ ಉಲ್ಲೇಖಿಸಿಲ್ಲ ಎಂದು ತೋರುತ್ತದೆ.

ಪೌಲನು "ಅಂತ್ಯದ ದಿನಗಳು" ಎಂಬ ಪದವನ್ನು ಆಯ್ಕೆ ಮಾಡುತ್ತಾನೆ. ಅವನು "ಅಂತ್ಯದ ದಿನಗಳು" ಎಂದು ಬರೆಯುವಾಗ ಯೂದನಿಗಿದ್ದಂತೆ ಅವನ ಮನಸ್ಸಿನಲ್ಲಿ ಭಿನ್ನವಾದ ಯಾವ ಸಂಗತಿಯೂ ಇರಲಿಲ್ಲ. **ಅಂತ್ಯದ ದಿನಗಳು** ಯೂದನು ಮತ್ತು ಆತನ ಓದುಗರು ಜೀವಿಸಿದ್ದ ದಿವಸಗಳನ್ನು ಒಳಗೊಂಡಿತ್ತು (ಇಬ್ರಿಯ 1:2 ನೋಡಿರಿ, ಅಲ್ಲಿ ಅದು "ಅಂತ್ಯದ ದಿನಗಳು" ಎಂದು ಉಲ್ಲೇಖಿಸಲಾಗಿದೆ). ಅವರು ಅಂತ್ಯದ ದಿನಗಳಲ್ಲಿ ಜೀವಿಸುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿ, ಯೂದನು ತನ್ನ ಓದುಗರ ಅನುಭವವನ್ನು ಅರಿಕೆಮಾಡುತ್ತಾನೆ, ಅದು "ಕುಚೋದ್ಯಗಾರರ" ಕಾಣಿಸಿಕೊಳ್ಳುವದರ ಕುರಿತಾದ "ತಮ್ಮ ಸ್ವಂತ ಭಕ್ತಿಹೀನ ದುರಾಶೆಯನ್ನು ಅನುಸರಿಸುವವರು" ಎಂಬ ಪ್ರವಾದನೆಯನ್ನು ಒಳಗೊಂಡಿದೆ (1 ತಿಮೊಥೆ 4:1 ನೋಡಿರಿ). ಯೂದನ ಓದುಗರು ಹಿಂದಿನಿಂದ ತಮಗೆ ಬರುತ್ತಿರುವ ಎಚ್ಚರಿಕೆಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದು ಅವಶ್ಯವಾಗಿದೆ. ಅಪೊಸ್ತಲರ ಎಚ್ಚರಿಕೆಗಳು ಸುಳ್ಳುಬೋಧಕರೊಂದಿಗೆ ಸಮಂಜಸವಾಗಿ ನಿರ್ವಹಿಸುವ ಬಲವನ್ನು ನೀಡುತ್ತವೆ.

**ವಚನ 19.** ಯೂದನು ಸ್ಪಷ್ಟೀಕರಿಸುತ್ತಾನೆ; ತಪ್ಪುತಿಳುವಳಿಕೆಯ ಯಾವ ಸಂಭವನೀಯತೆಯೂ ಇರಬಾರದೆಂದು ಆತನು ಬಯಸುತ್ತಾನೆ. ಅಪೊಸ್ತಲರ ಪ್ರವಾದನೆಗಳು ಯೂದನು ಸಂಬೋಧಿಸಿದ ಸಭೆಯನ್ನು ಸೋಸುತ್ತಿರುವ ಬೋಧಕರನ್ನು ಉಲ್ಲೇಖಿಸಿ ಮಾತನಾಡುತ್ತವೆ. ಇವುಗಳು, ಎಂದು ಯೂದನು ಉಪಯೋಗಿಸುವ ವಾಕ್ಯಭಾಗದಲ್ಲಿ ಅಗೌರವವಿದೆ. **ಅಧನ್ನು** ಆತನು ಮೇಲಿಂದ ಮೇಲೆ ಉಪಯೋಗಿಸುತ್ತಾನೆ (ವಚನಗಳು 10, 12, 16). ಸುಳ್ಳುಬೋಧಕರು ಸಹ ಆಗಿದೆ. ಬಹುಶ ಅವರು ವಿಶೇಷವಾದ ಆತ್ಮೀಕ ಪ್ರಕಟನೆಗಳನ್ನು

ಹೊಂದಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ. ಯೂದನು ಹೇಳುತ್ತಾನೆ ವಿಷಯವು ನಿಖರವಾಗಿ ಇದಕ್ಕೆ ವಿರೋಧವಾಗಿದೆ. ಸುಳ್ಳುಬೋಧಕರು "ಪ್ರಾಕೃತಮನುಷ್ಯರಾಗಿದ್ದಾರೆ" *(psuchikos)* ಅವರು **ದೇವರಾತ್ಮವಿಲ್ಲದವರಾಗಿದ್ದಾರೆ.** "ಪ್ರಾಕೃತಮನುಷ್ಯರು" ಎಂದು ಅನುವಾದಿಸಿದ ಪದವನ್ನು ಆಂಗ್ಲಭಾಷೆಯಲ್ಲಿ ಅನುವಾದಿಸುವದು ಕಠಿಣವಾಗಿದೆ. ಇದರ ಅರ್ಥ ಅವರ ಹೃದಯ ಮತ್ತು ಮನಸ್ಸು ಅವರ ಸ್ವಂತ ಬಯಕೆಗಳೆಡೆಗೆ ಎಷ್ಟರ ಮಟ್ಟಿಗೆ ಕೇಂದ್ರಿಕೃತವಾಗಿದೆಯೆಂದರೆ ಅವರಿಗೆ ಯಾವುದರಲ್ಲಿಯೂ ತೃಪ್ತಿಯಿರುವದಿಲ್ಲ, ಕೇವಲ ಮೃಗೀಯ ಸಂತೋಷವನ್ನು ಉಳಿಸಿಕೊಳ್ಳುತ್ತಾರೆ.[1]

ಸುಳ್ಳು ಬೋಧಕರು **ಬೋಧಗಳನ್ನು ಉಂಟುಮಾಡುವದಕ್ಕೆ ಕಾರಣರಾಗಿದ್ದಾರೆ.** ಯೂದನು ಕ್ರಿಸ್ತನ ದೇಹದಲ್ಲಿ ಭೇದಗಳನ್ನು ಹುಟ್ಟಿಸುವವರು ತಾವು ಪ್ರಾರಂಭದಲ್ಲಿ ಹೊಂದಿದ ಸಂಪ್ರದಾಯಗಳಿಗೆ ವಿರುದ್ಧವಾದ ಅನ್ಯದೇಶಿಯ ಬೋಧನೆ ಮತ್ತು ಆಚಾರಗಳನ್ನು ಉದ್ಭವಿಸುವವರಾಗಿದ್ದಾರೆಂದು ಯೂದನು ತಿಳಿದುಕೊಂಡಿದ್ದಾನೆ. ಯೂದನು ಮತ್ತು ಅಪೊಸ್ತಲರ ಬೋಧನೆಯನ್ನು ಅನುಸರಿಸಿದ ಇತರರು ಭೇದಹುಟ್ಟಿಸುವದಕ್ಕೆ ಕಾರಣರಾಗಿರಲಿಲ್ಲ. ಅಸಂಖ್ಯಾತ ಸಂದರ್ಭಗಳಲ್ಲಿ ಕ್ರಿಸ್ತನ ದೇಹದಲ್ಲಿ ಜನರಿಗೆ ಹೊಸ ಬೋಧನೆಗಳನ್ನು ಪರಿಚಯಿಸಲಾಗುತ್ತಿತ್ತು. ಪ್ರಾಮಾಣಿಕರು ವಿರೋಧಿಸುವಾಗ, ಹೊಸತನವನ್ನು ತರುವವರು ಇವರನ್ನು ಭೇದಹುಟ್ಟಿಸುವದಕ್ಕೆ ಕಾರಣರೆಂದು ದೂರುತ್ತಿದ್ದರು. ನೂತನವಾದದ್ದು ಮತ್ತು ಹೊಸದಾದದ್ದು ಪ್ರಗತಿಪರವಾದದ್ದು ಯಾವಾಗಲೂ ಉತ್ತಮವಾದದ್ದಲ್ಲ. ಯೂದನು ಸಂಬೋಧಿಸಿದ ಸಭೆ ಹೊಸ ಬೋಧಕರಿಂದಾಗಿ ಉತ್ತಮವಾದದ್ದರೆಡೆಗೆ ಮುನ್ನಡೆಯುತ್ತಿರಲಿಲ್ಲ. ಹೊಸಬರು ಭೇದಹುಟ್ಟಿಸುವದಕ್ಕೆ ಕಾರಣರಾಗಿದ್ದರು. ಅವರೇ ಕ್ರಿಸ್ತನ ದೇಹವನ್ನು ವೈರಿ ಪಕ್ಷವಾಗಿ ವಿಭಾಗಿಸಿದ್ದರು.

**ವಚನ 20.** ಕ್ರೈಸ್ತರಿಗೆ ತಮ್ಮ ಸ್ವಂತ ಆತ್ಮೀಕ ಪ್ರಗತಿಯ ಜವಾಬ್ದಾರಿಯಿದೆ. ಯೂದನು ಅವರಿಗೆ ಅವರು ತಮ್ಮನ್ನು ತಾವು ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ಜ್ಞಾಪಿಸುತ್ತಿದ್ದಾನೆ. ಇದರ ಅರ್ಥ ದೇವರು ಅವರನ್ನು ತಮ್ಮದೇ ಆದ **ಯೋಜನೆಗಳನ್ನು ಮಾಡಿಕೊಳ್ಳಲು** ಬಿಟ್ಟುಬಿಟ್ಟಿದ್ದಾನೆ ಎಂದಲ್ಲ. ಸಮುದಾಯಕ್ಕೆ ಆತ್ಮೀಕ ಪೋಷಣೆಯ ಮೂಲ ಅತ್ಯಂತ **ಪರಿಶುದ್ಧವಾದ ನಂಬಿಕೆಯನ್ನು** ಹೊಂದಿರುವ ದೇವ ಜನರಾಗಿದ್ದಾರೆ. ನಂಬಿಕೆಯ ವಾಸ್ತವತೆ ಕರ್ತನಾದ ಯೇಸು ಕ್ರಿಸ್ತನಾಗಿದ್ದಾನೆ. ಇದರೊಟ್ಟಿಗೆ "ಅತ್ಯಂತ ಪರಿಶುದ್ಧವಾದ ನಂಬಿಕೆ" ಆತನ ಅಪೊಸ್ತಲರ ಮೂಲಕ ಕ್ರಿಸ್ತನ ಕುರಿತಾಗಿ ಪ್ರಕಟಿಸಿರುವ ಸಂಗತಿಗಳು ಸುತ್ತುವರೆದಿರುತ್ತದೆ. ಅಪೊಸ್ತಲರ ಮೂಲಕ ಹರಿದು ಬಂದ ನಂಬಿಕೆಯ ಸಾಧನ ಯಾವದೆಂದರೆ ಪವಿತ್ರಾತ್ಮನಾಗಿದ್ದಾನೆ, ಮುಂದೆ, ಪವಿತ್ರಾತ್ಮನು ನಮ್ಮಲ್ಲಿ ವಾಸಿಸುತ್ತಾನೆ ಮತ್ತು ಕ್ರಿಸ್ತನಲ್ಲಿ ನಂಬಿಕೆಯನ್ನು ಹುಟ್ಟಿಸುತ್ತಾನೆ, ಆದುದರಿಂದ, ಯೂದನು ತನ್ನ ಓದುಗರಿಗೆ **ಪವಿತ್ರಾತ್ಮಪ್ರೇರಿತರಾಗಿ ಪ್ರಾರ್ಥಿಸುವದು** ಆತ್ಮೀಕ ಅಭಿವೃದ್ಧಿಯ ಅಂಶವಾಗಿದೆ ಅದಕ್ಕಾಗಿ ಅವರು ಹಾರೈಸಬೇಕು ಎಂದು ಸೂಚಿಸುತ್ತಾನೆ.

**ವಚನ 21.** ಆತನ ಪತ್ರವು ಮುಕ್ತಾಯಕ್ಕೆ ಬಂದ ಹಾಗೆ, ಯೂದನು ತನ್ನ ಓದುಗರಿಗೆ ಕ್ರೈಸ್ತರ ಕಾರ್ಯದ ಮಹತ್ವವನ್ನು ಜ್ಞಾಪಿಸುತ್ತಾನೆ. ಸುಳ್ಳುಬೋಧನೆಯನ್ನು ಜಯಿಸುವದು ಮತ್ತು ಅಪೊಸ್ತಲರ ನಂಬಿಕೆಯಲ್ಲಿ ದೃಢಪ್ರಯತ್ನವನ್ನು ಮಾಡುವದು ಅವರ ನಂಬಿಕೆಯ ಫಲಿತಾಂಶವನ್ನು ಮತ್ತು ಅವರ ನಿರೀಕ್ಷೆಯ ಕೊನೆಯನ್ನು ನಿರ್ಧರಿಸುತ್ತದೆ. ದೃಢಪ್ರಯತ್ನ, "ದೇವಜನರಿಗೆ ಶಾಶ್ವತವಾಗಿ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆ" (ವಚನ 3) ಅವರು ದೇವರ ರಾಜ್ಯದ ಭಾಗಿದಾರರಾಗಿ ಜೀವಿಸಿದ್ದರು ಎಂದು ಇದರ ಅರ್ಥವಾಗಿದೆ.

ದೇವರ ರಾಜ್ಯವಾಗಲಿ "ಅತ್ಯಂತ ಪರಿಶುದ್ಧವಾದ ನಂಬಿಕೆ" ಆಗಲಿ ಒಂದರ ಅನುಪಸ್ಥಿತಿಯಲ್ಲಿ ಇನ್ನೊಂದರ ಕುರಿತು ಮಾತನಾಡಬಹುದು. ಅವು ನಿಖರವಾಗಿ ಒಂದೇ ಆಗಿರದಿದ್ದಲ್ಲಿ, ಅವರು ಪರಸ್ಪರ ಅವಲಂಬಿಸಿವೆ. ಯೇಸುವಿನ ಸೇವೆಯಲ್ಲಿ ದೇವರ ರಾಜ್ಯ

ಉಪಸ್ಥಿತಿಯಲ್ಲಿತ್ತು ಎಂಬ ಭಾವನೆಯಿತ್ತು (ಮತ್ತಾಯ 12:28) ಮತ್ತು ಅದು ಬರಲಿಕ್ಕಿದೆ ಎಂಬ ಭಾವನೆಯು ಇತ್ತು (ಮಾರ್ಕ 9:1). ಯೇಸುವಿನ ಜೀವಿತ ಮತ್ತು ಬೋಧನೆ ದೇವರ ರಾಜ್ಯದ ಬಾಗಿಲನ್ನು ತೆರೆಯಿತು ಆದರೆ ದೇವರ ರಾಜ್ಯವು ಆತನ ಮರಣ, ಪುನರುತ್ಥಾನ ಮತ್ತು ಸ್ವರ್ಗಾರೋಹಣದ ನಂತರ ಸಂಪೂರ್ಣವಾಗಿ ಅರ್ಥವಾಯಿತು. ಅಪೊಸ್ತಲನಾದ ಪೇತ್ರನು ಪಂಚಾಶತ್ತಮದಿನದಂದು ಸುವಾರ್ತೆಯನ್ನು ಪ್ರಕಟಿಸಿದಾಗ ಮತ್ತು ಜನರು ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನವನ್ನು ಹೊಂದಿದಾಗ ದೇವರ ರಾಜ್ಯವು ಒಂದು ಪ್ರಾಮುಖ್ಯವಾದ ಭಾವನೆಯೊಂದಿಗೆ ಅಸ್ತಿತ್ವದಲ್ಲಿ ಬಂತು (ಅಪೊಸ್ತಲರ ಕೃತ್ಯಗಳು 2:37-42). ಪೌಲನು ಕ್ರಿಸ್ತನು "ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯಕುಮಾರನ ರಾಜ್ಯ ದೊಳಗೆ ಸೇರಿಸಿದನು" ಎಂದು ಹೇಳುವಂತಾಯಿತು (ಕೊಲಸ್ಸೆ 1:13).

ಕ್ರೈಸ್ತರು ಈ ಜೀವಿತದಲ್ಲಿ ದೇವರ ರಾಜ್ಯದಲ್ಲಿ ಭಾಗ ತೆಗೆದುಕೊಂಡಿದ್ದಾಗ್ಯೂ, ಇನ್ನೂ ದೇವರ ರಾಜ್ಯಕ್ಕಾಗಿ ಕಾಯ್ದಿರುವ ಭಾವನೆ ಅವರಲ್ಲಿದೆ. ಯೂದನು ತನ್ನ ಗಮನವನ್ನು ಕಾಯ್ದಿರುವದರೆಡೆಗೆ ತಿರುಗಿಸುತ್ತಾನೆ. ದೇವರಿಗಾಗಿ **ಕಾಯ್ದಿರುವನು.** ಆತನು ತನ್ನ ಸಮಯದ ಚೌಕಟ್ಟಿನಲ್ಲಿ ತಮ್ಮ ಆಜ್ಞೆಗಳನ್ನು ನೀಡಲು ಕಾಯ್ದಿರುವದು, ಇದು ಅನೇಕ ದೇವಜನರಿಗೆ ಕಷ್ಟಕರವಾದ ಅನುಭವವಾಗಿದೆ. ಕೆಲವು ಕೀರ್ತನೆಗಾರರು ಆತ್ಮೀಕ ಹಂಬಲದ ತುದಿಗೆ ತಲುಪಿದ್ದಾರೆ ಅದು ಯೂದನ ಭಾವನೆಗಳಿಗಿಂತ ಅಷ್ಟೊಂದು ಭಿನ್ನವಾಗಿಲ್ಲ. ಉದಾಹರಣೆಗೆ, "ಯೆಹೋವನನ್ನು ನಿರೀಕ್ಷಿಕೊಂಡರು; ದೃಢವಾಗಿರು; ನಿನ್ನ ಹೃದಯವು ಧೈರ್ಯದಿಂದಿರಲಿ; ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು" (ಕೀರ್ತನೆ 27:14). "ನಮ್ಮ ಮನಸ್ಸು ಯೆಹೋವನಿಗೋಸ್ಕರ ಕಾದಿದೆ; ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು" (ಕೀರ್ತನೆ 33:20). ಪೌಲನಂತೆ ಯೂದನು ಕಾಯ್ದಿರುವದು ಇದೆ ಎಂಬುದನ್ನು ಸ್ಪಷ್ಟಪಡಿಸುತ್ತಾನೆ. "ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು; ಲಯವಾಗುವ ವಸ್ತು ನಿರ್ಲಯಪದವಿಗೆ ಬಾಧ್ಯವಾಗುವದಿಲ್ಲ" (1 ಕೊರಿಂಥ 15:50). ಮರಣದ ಈ ಭಾಗದಲ್ಲಿ ಕ್ರೈಸ್ತರು ರಕ್ತಮಾಂಸಧಾರಿಗಳಾಗಿ ಉಳಿಯುತ್ತಾರೆ. ಎಲ್ಲಿಯವರೆಗೆ ಈ ಮಾಂಸ ಮತ್ತು ರಕ್ತ ಅಸ್ತಿತ್ವ ವಿಶ್ವಾಸಿಗಳನ್ನು ವರ್ಗೀಕರಿಸುತ್ತದೋ, ಅವರಿಗೆ ಹಂಬಲಿಸಲು ಮತ್ತು ನಿರೀಕ್ಷಿಸಲು ಅನಾದರೊಂದು ಇರುತ್ತದೆ. ಇದು ಯೂದನು ಹೇಳಿರುವ ಬಲವಾಗಿರುವ ಇಚ್ಛೆಯಾಗಿದೆ, ಯಾರು ಕ್ರಿಸ್ತನಿಗೆ ಸಂಬಂಧಿಸಿದವರಾಗಿರುತ್ತಾರೋ ಅವರು **ವ್ಯಾಕುಲದಿಂದ** ಕಾಯ್ದಿರುತ್ತಾರೆ (2 ತಿಮೊಥೆ 4:8 ನೋಡಿರಿ).

ಈಗಾಗಲೇ ಹೊಂದಿರುವ ಮತ್ತು ಇನ್ನೂ ಎದುರುನೋಡುತ್ತಿರುವದು ಪ್ರಸ್ತುತ ದೇವರರಾಜ್ಯದ ಬಾಧ್ಯಸ್ಥತೆಯ ಗುಣಲಕ್ಷಣ ಮಾತ್ರವಲ್ಲ ಇದು **ನಿತ್ಯಜೀವದ** ತಿಳುವಳಿಕೆಯ ಅವಿಭಾಜ್ಯ ಅಂಗವೂ ಸಹ ಆಗಿದೆ. ಕ್ರಿಸ್ತನಲ್ಲಿ ಜೀವ ಪ್ರಾರಂಭವಾಗಿದೆ, ಆದರೆ ಈ ಕ್ಷಣದಲ್ಲಿ ಪ್ರಾಮಾಣಿಕತೆ ವಿಷಯವಾಗಿರುತ್ತದೆ. ಮುಂದೆ, ಕ್ರಿಸ್ತನ ಪ್ರಕಟಗೊಳ್ಳುವಾಗ, ಕೊನೆಯ ತುತೂರಿ ಧ್ವನಿ ಕೇಳಿಸುವಾಗ (1 ಕೊರಿಂಥ 15:52) ಪರಿವರ್ತನೆ ಉಂಟಾಗುತ್ತದೆ. ಮಾಂಸ ಮತ್ತು ರಕ್ತದ ಮಲೀನತೆಯು ಹೋಗಿ ಶುದ್ಧತೆಯನ್ನು ಧರಿಸಿದವರಾಗುತ್ತೇವೆ. **ನಮ್ಮ ಕರ್ತನಾದ ಯೇಸು ಕ್ರಿಸ್ತನ ಕರುಣೆಗೆ ಅನುಸಾರವಾಗಿ,** ತಾತ್ಕಾಲಿಕವಾದ ಮತ್ತು ಈ ಲೋಕದ ನಶ್ವರವಾದ ಜೀವಿತವನ್ನು ಅಮರತ್ವವು ನುಂಗಿಹಾಕುತ್ತದೆ. ಕ್ರೈಸ್ತರು "ಜೀವಕ್ಕಾಗಿ" ಹಂಬಲಿಸುವಾಗ ಅವರು ಅದನ್ನು ಮುಗಿದುಹೋಗುವಂತದಲ್ಲ ಎಂದು ಗ್ರಗಿಸುವ ತಪ್ಪನ್ನು ಮಾಡುವದಿಲ್ಲ. "ಶಾಶ್ವತ" *(aiōnios).* ಎಂಬ ಪದವು ವಾಕ್ಯದಲ್ಲಿ ಅವಧಿಯಿಲ್ಲದ್ದು ಎಂದು ಸ್ವಾಭಾವಿಕವಾಗಿದೆ. ಆದಾಗ್ಯೂ, ಪದವು ಜೀವಿತದ ಗುಣಮಟ್ಟವನ್ನು ಅಷ್ಟಾಗಿ ಸೂಚಿಸುವದಿಲ್ಲ - ಅದು ಜೀವಿತದ ಗುಣಮಟ್ಟದಲ್ಲಿ ಇದ್ದಂತೆ - ಕೊನೆಯಿಲ್ಲದ್ದು, ಅದು ಬರಲಿಕ್ಕಿರುವ ಕಾಲದ ಗುಣಲಕ್ಷಣವಾಗಿದೆ.[2] ಅದೇ ಸಮಯದಲ್ಲಿ "ನಿತ್ಯಜೀವದ" ಸಂಪೂರ್ಣತೆಯು ಇನ್ನೂ ಬರಲಿಕ್ಕಿದೆ, ಕ್ರಿಸ್ತನು "ನಿತ್ಯ ಜೀವದ" ಮೇಲೆ ಈಗಾಗಲೇ

ಪ್ರಭುತ್ವವನ್ನು ಹೊಂದಿದ್ದಾನೆ ಎಂಬ ಭಾವನೆಯಿದೆ.

ಹಳೆ ಒಡಂಬಡಿಕೆಯಲ್ಲಿ ನಿರ್ಧಿಷ್ಟವಾಗಿ "ಜೀವ" ದೇವರೊಂದಿಗೆ ಸಮಾಧಾನ, ಜ್ಞಾನ ಮತ್ತು ಆಶೀರ್ವಾದ ಗುಣಗಳ ಉಪಸ್ಥಿತಿಯಿಂದ ಹೆಸರಿಸಿ ವರ್ಗೀಕರಿಸಲಾಗುತಿತ್ತು. ಮೋಶೆಯು ಇಸ್ರಾಯೇಲರಿಗೆ, "ನೋಡಿರಿ, ನಾನು ಜೀವಶುಭಗಳನ್ನೂ ಮರಣಾಶುಭಗಳನ್ನೂ ಈಗ ನಿಮ್ಮ ಮುಂದೆ ಇಟ್ಟಿದ್ದೇನೆ" ಎಂದು ಹೇಳುತ್ತಾನೆ (ಧರ್ಮೋಪದೇಶಕಾಂಡ 30:15). ಆತನು ಇಸ್ರಾಯೇಲ್ಯರಿಗೆ ಕಾನಾ ದೇಶದಲ್ಲಿ ಅವರದಾಗಿರುವ ಜೀವಿತದ ಗುಣಂಟ್ಟವನ್ನು ಗಮನಿಸುವಂತೆ ಕರೆನೀಡುತ್ತಿದ್ದಾನೆ ಅದೇ ರೀತಿಯಲ್ಲಿ ಯೇಸು "ಮಗನು ಸ್ವಂತ ಜೀವವುಳ್ಳವನಾಗಿದ್ದಾನೆ" ಎಂದು ಪ್ರಕಟಿಸಿದಾಗ (ಯೋಹಾನ 5:26). ಆತನು ದೇವರು ತನಗೆ ನೀಡಿರುವ ಜೀವಿತದ ಗುಣಮಟ್ಟದ ಕುರಿತಾಗಿ ಮಾತನಾಡುತ್ತಿದ್ದಾನೆ. ಯೇಸು ಅನುಭವಿಸಿದ ಅದೇ ಜೀವಿತದ ಗುಣಮಟ್ಟವನ್ನು ಆತನ ಜನರು ಅನುಭವಿಸಬೇಕು. "ನಿತ್ಯ ಜೀವವು" ಈಗಲೇ ಇದೆ, ಆದರೆ ಅದು ಇನ್ನೂ ಬರಲಿಕ್ಕಿದೆ. ಯೂದನು ಹೇಳಿದಂತೆ ನಾವು "ವ್ಯಾಕುಲದಿಂದ" ಅದಕ್ಕಾಗಿ ಎದುರುನೋಡುವವರಾಗಿದ್ದೇವೆ.

ಕ್ರಿಸ್ತನಲ್ಲಿರುವವರೆಲ್ಲರೂ ಈ ಗುಣಮಟ್ಟದ ಜೀವಿತದಲ್ಲಿ ಈ ಲೋಕದಲ್ಲಿ ಭಾಗಿಗಳಾಗಿದ್ದಾರೆ ಅದು ಬರಲಿಕ್ಕಿರುವ ಕಾಲದ ಗುಣಲಕ್ಷಣವಾಗಿದೆ. ಯೇಸು ಹೇಳಿದ್ದು "ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು" (ಯೋಹಾನ 3:36). ಅವರು ಅದನ್ನು ಇಲ್ಲಿ ಮತ್ತು ಈಗಲೇ ಹೊಂದಿದ್ದಾರೆ. ಆತನು ಮುಂದುವರೆದು "ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವನು ನಿತ್ಯಜೀವವನ್ನು ಹೊಂದಿದ್ದಾನೆ" (ಯೋಹಾನ 5:24) ಎಂದು ಹೇಳುತ್ತಾನೆ. ಆತ್ಮೀಕ ಸಂಪನ್ಮೂಲ ನಮ್ಮನ್ನು **ನಾವು ದೇವರ ಪ್ರೀತಿಯಲ್ಲಿ ಕಾಯ್ದಿಟ್ಟುಕೊಳ್ಳುವದು,** ಪರಿಶುದ್ಧ ಜೀವಿತವನ್ನು ಜೀವಿಸುವದು, ಆರಾಧಿಸುವದು, ಆತನಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ಆತನ ಸೇವೆಯನ್ನು ಮಾಡುವದನ್ನು ಒಳಗೊಂಡದ್ದಾಗಿದೆ. ಒಬ್ಬನು ಕರ್ತನು ಬರುವದನ್ನು ನಿರೀಕ್ಷೀಸುತ್ತಿದ್ದಲ್ಲಿ ತನ್ನನ್ನು ಆತನ ಪ್ರೀತಿಯಲ್ಲಿ ಕಾಯ್ದಿರಿಸಿಕೊಳ್ಳುತ್ತಾನೆ.

**ವಚನಗಳು 22, 23.** ಒಬ್ಬನು ಬಲಹೀನನಾಗಿರುವದರಿಂದ, ಅವನು ಸುಳ್ಳು ಬೋಧಕರ ಪಾಖಂಡ ಬೋಧನೆಗಳು ಅವನನ್ನು ತೆಗೆದುಕೊಂಡು ಹೋಗಿರುವದರಿಂದ, ಕ್ರೈಸ್ತರು ಅವನನ್ನು ತಿರಸ್ಕರಿಸಬೇಕು ಮತ್ತು ಮರೆತುಬಿಡಬೇಕೆಂದೇನು ಅಲ್ಲ. ಪ್ರಾಮಾಣಿಕರು **ಸಂದೇಹಪಡುವವರ ಮೇಲೆ ಕರುಣೆ ತೋರಿಸಬೇಕು.** ಯಾರು ತಮ್ಮ ಸ್ವಂತ ಜ್ಞಾನದ ಮೇಲೆ ವಿಶ್ವಾಸವಿಡುತ್ತಾರೋ, ಯಾರು ಭೇದವನ್ನು ಹುಟ್ಟಿಸುತ್ತಾರೋ, ಯಾರು ದೇವರ ಕೃಪೆಯನ್ನು ವಿಷಯಲಂಪಟತನಕ್ಕೆ ತಿರುಗಿಸುತ್ತಾರೋ (ವಚನ 4) ಅವರೊಂದಿಗೆ ಯೂದನಿಗೆ ಸ್ವಲ್ಪ ಸಮಯ ಮಾತ್ರವಿತ್ತು. ಹಾಗೂ, ಸಂದೇಹಪಡುವ ಎಲ್ಲರೂ ಸಂಪೂರ್ಣವಾಗಿ ದೇವರರಾಜ್ಯದಿಂದ ತಪ್ಪಿಸಿಕೊಂಡವರಲ್ಲ. ಅವರಲ್ಲಿ ಕೆಲವರು ನಂಬಿಕೆಯಲ್ಲಿ ಎಳಸಾಗಿದ್ದರು, ಅವರು ಏನನ್ನು ನಂಬಬೇಕು. ವಿಶ್ವಾಸವಿಡಬೇಕು ಮತ್ತು ಕರುಣೆಯುಳ್ಳವರಾಗಿರಬೇಕು ಎಂಬುದರಲ್ಲಿ ಇನ್ನೂ ನೆಲೆಯಾಗಿರಲಿಲ್ಲ. ಅವರೂ ಸಹ "ಸಂದೇಹಪಡುವವರಲ್ಲಿ" ಎಣಿಸಲ್ಪಡುತ್ತಿದ್ದರು. ಯೂದನು ನಂಬಿಕೆಯಲ್ಲಿ ಬಲವಾಗಿರುವವರನ್ನು ಅವರ ಮೇಲೆ ಕರುಣೆ ಮತ್ತು ಅನುಕಂಪವುಳ್ಳವರಾಗಿರಬೇಕೆಂದು ಕರೆನೀಡುತ್ತಾನೆ. ಪ್ರಾಮಾಣಿಕರು ಸಂದೇಹ ಪಡುವವರನ್ನು ಕರ್ತನಬಳಿಗೆ ತಿರುಗಿಸಬೇಕು (ನೋಡಿರಿ ಯಾಕೋಬ 5:20).

ಯೂದನು ಈ ವಚನಗಳಲ್ಲಿ ಎರಡು ಅಥವಾ ಮೂರು ಗುಂಪುಗಳ ಜನರನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನೋ ಏನೋ ಎಂಬುದು ಖಚಿತವಾಗಿಲ್ಲ. ಲೇಖಕನು ಕನಿಷ್ಟಪಕ್ಷ ಎರಡು ಗುಂಪುಗಳಲ್ಲಿ ವ್ಯತ್ಯಾಸವನ್ನು ತೋರಿಸಿದ್ದಾನೆ. ವಚನ 22ರಲ್ಲಿ ಸಂದೇಹಪಡುವವರನ್ನು ಪ್ರಸ್ತಾಪಿಸಿದ ನಂತರ, ಆತನು ವಚನ 23ರಲ್ಲಿ ಮುಂದುವರೆದು ಇತರರನ್ನು ರಕ್ಷಿಸಿರಿ ಎಂದು ಬರೆಯುತ್ತಾನೆ. "ಇತರರು" ಸಂದೇಹಪಡುವವರಿಂದ ಪ್ರತ್ಯೇಕಿ

ಸಲ್ಪಟ್ಟವರು ಎಂದು ಕಂಡುಬರುತ್ತದೆ. ಬಹುಶಃ ಪೇತ್ರನು ಸಂದೇಶಪಡುವವರನ್ನು ಮೂರು ಗುಂಪುಗಳಾಗಿ ವಿಂಗಡಿಸಿರಬಹುದು: (1) ಕೆಲವರು ಸಂದೇಹಪಡುವವರು (2) ಕೆಲವರು ಬೆಂಕಿಯ ಬಾಯೊಳಗಿಂದ ಎಳೆದುಕೊಳ್ಳಲ್ಪಡುವವರು ಮತ್ತು (3) ಪ್ರಾಮಾಣಿಕರು ಕರುಣಿಸಬೇಕಾದ ಕೆಲವರು. ನಿರಕಟವಾದ ಸಂಬಂಧವಿರುವ ನಂತರದ ಎರಡು ಗುಂಪುಗಳು ಯೂದನು ಕೇವಲ ಎರಡು ಗುಂಪುಗಳನ್ನು ಉಲ್ಲೇಖಿಸುತ್ತಿದ್ದಾನೆ ಎಂದು ಸೂಚಿಸುತ್ತವೆ. ಎರಡರ ಮಧ್ಯದಲ್ಲಿ ಒಂದರ ಮೇಲೆಒಂದು ಮೇಲೆ ಚಾಚಿದಂತೆ ತೋರುತ್ತದೆ. ಲೇಖಕನು ಮೂರು ಗುಂಪಿನ ಜನರ ಮಧ್ಯದಲ್ಲಿ ತೀರ್ವವಾದ ವ್ಯತ್ಯಾಸವನ್ನು ತರಲು ಬಯಸಿದ್ದನು ಎಂಬುದು ಅಸಂಭವನೀಯವಾಗಿದೆ. ಸಂದೇಹಪಡುವವರಲ್ಲಿ ಕೆಲವರು ಬೆಂಕಿಯೊಳಗಿಂದ ಎಳಕೊಂಡು ರಕ್ಷಿಸಲ್ಪಡಬೇಕಾದವರಾಗಿದ್ದರು. "ಕರುಣೆ" ಎಂಬುದು 22 ಮತ್ತು 23ನೇ ವಚನದುದ್ದಕ್ಕೂ ಪರಿಣಾಮಕಾರಿಯಾದ ಪದವಾಗಿದೆ.

ಬಹುಶಃ ಸತ್ಯವೇದದಲ್ಲಿ ಯೂದನ ಪುಸ್ತಕದ ಕೊನೆಯ ವಚನಗಳಲ್ಲಿದ್ದಂತೆ "ಪಾಪವನ್ನು ಹಗೆಮಾಡುವದು ಆದರೆ ಪಾಪಿಯನ್ನು ಪ್ರೀತಿಸುವದರ" ಕುರಿತು ಸ್ಪಷ್ಟವಾದ ಉದಾಹರಣೆ ಇನ್ನೊಂದಿಲ್ಲ. ಒಬ್ಬನು ತನ್ನ ಸಹೋದರನು ಪಾಪದಲ್ಲಿ ಬೀಳುವದನ್ನು ಕಂಡಾಗ ಅಥವಾ ಸಿದ್ಧಾಂತಗಳ ತಪ್ಪನ್ನು ಮಾಡುವಾಗ, ಆತನನ್ನು ಪುನಃ ಹೊಂದಿಕೊಳ್ಳಲು ತನ್ನ ಸಾಮರ್ಥ್ಯದಲ್ಲಿರುವದನ್ನೆಲ್ಲಾ ಮಾಡಬೇಕು. ಕ್ರೈಸ್ತ ಸಮುದಾಯ ಹೊಯ್ದಾಡುವ ಪಾಪಿಯನ್ನು ಆತ್ಮವನ್ನು ತೊರೆಯಬಾರದು.

## ಮುಕ್ತಾಯದ ಧಾರ್ಮಿಕ ಅಭಿಪ್ರಾಯ (24, 25)

**[24]ಎಡವಿಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನಾಗಿರುವ [25]ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಪ್ರಭಾವ ಮಹತ್ವ ಆದಿಪತ್ಯ ಅಧಿಕಾರಗಳು ಎಲ್ಲಾ ಕಾಲಕ್ಕಿಂತ ಮೊದಲು (ಇದ್ದ ಹಾಗೆ) ಈಗಲೂ ಯಾವಾಗಲೂ ಇರಲಿ ಆಮೆನ್.**

ವಚನ 24. ಆತನ ಪತ್ರವು ಚಿಕ್ಕದಾಗಿದ್ದರೂ ಮತ್ತು ಅದರ ವಿಷಯವಸ್ತು ಪ್ರಸ್ತುತ ಓದುಗರಿಗೆ ಸ್ವಲ್ಪಮಟ್ಟಿಗೆ ಬೇಸರ ತರಿಸುವಂತದ್ದಾಗಿದ್ದರೂ ಯೂದನು ಸತ್ಯವೇದದಲ್ಲಿರುವ ಒಂದು ಅತ್ಯಂತ ಸುಂದರವಾದ ಧಾರ್ಮಿಕ ಅಭಿಪ್ರಾಯದೊಂದಿಗೆ ಮುಕ್ತಾಯಗೊಳಿಸುತ್ತಾನೆ. ಯೂದನು, ಈಗಾಗಲೇ ವಿಶ್ವಾಸಿಗಳನ್ನು ತಮ್ಮನ್ನು ತಾವು ದೇವರ ಪ್ರೀತಿಯಲ್ಲಿ ಅಭಿವೃದ್ಧಿಪಡಿಸಿಕೊಳ್ಳಬೇಕು ಮತ್ತು ಕಾಯ್ದುಕೊಳ್ಳಬೇಕು ಎಂದು ಜ್ಞಾಪಿಸಿದ್ದರೂ, ಈಗ ಆತನು ದೇವರ ಕೃಪೆಯ ಭರವಸೆಯೊಂದಿಗೆ ವೈಯಕ್ತಿಕ ಜವಾಬ್ದಾರಿಯೆಡೆಗೆ ಎಂದು ಜ್ಞಾಪಿಸಿದ್ದರೂ, ಈಗ ಆತನು ದೇವರ ಕೃಪೆಯ ಭರವಸೆಯೊಂದಿಗೆ ವೈಯಕ್ತಿಕ ಜವಾಬ್ದಾರಿಯೆಡೆಗೆ ಸಮಾನಾಂತರಗೊಳಿಸುತ್ತಾನೆ. ಅಲ್ಲಿ ಸಂದೇಹಕ್ಕೆ ಅವಕಾಶವಿಲ್ಲ. ಕ್ರಿಸ್ತನೂ ಯಾವಾಗಲೂ ವಿಶ್ವಾಸಿಯ ಪಕ್ಕದಲ್ಲಿ ನಿಂತುಕೊಂಡು ಅವನನ್ನು ಬಿದ್ದುಹೋಗದಂತೆ ತಡೆಯುತ್ತಾನೆ. ಕರ್ತನಾದ ಯೇಸು ಕ್ರಿಸ್ತನು ನಿಮ್ಮನ್ನು ಎಡವದಂತೆ ಕಾಯುವದಕ್ಕೆ ಶಕ್ತನಾಗಿದ್ದಾನೆ. ಈ ಪದಗಳಲ್ಲಿ ವಿಶ್ವಾಸಿಯನ್ನು ಅತಿಯಾದ ಭರವಸೆಯುಳ್ಳವರನ್ನಾಗಿಸಲು ಪ್ರೋತ್ಸಾಹಿಸುವ ಯಾವುದು ಇಲ್ಲ. ನಂಬಿಕೆಯಲ್ಲಿ ದೃಢವಾಗಿ ನಿಲ್ಲುವ ಜವಾಬ್ದಾರಿಯನ್ನು ಕೇವಲ ವಿಶ್ವಾಸಿಗಳ ಹೆಗಲಿಗೆ ಸ್ಥಳಾಂತರಿಸಲಾಗುವದಿಲ್ಲ. ಇಲ್ಲಿರುವ ಭರವಸೆ ಎಂದರೆ ಒಬ್ಬನು ಕ್ರಿಸ್ತನಲ್ಲಿ ತನ್ನ ನಂಬಿಕೆಯನ್ನು ಇಟ್ಟು, ಪಶ್ಚಾತ್ತಾಪಪಟ್ಟು ಪಾಪದ ಜೀವಿತದಿಂದ ತಿರುಗಿಕೊಳ್ಳುವಾತನು - ದೃಢವಾಗಿ ನಿಂತುಕೊಳ್ಳುತ್ತಾನೆ. ದೇವರು ಆತನನ್ನು ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನಾಗಿರುತ್ತಾನೆ.

**ವಚನ 25.** ಯೂದನಿಗೆ **ದೇವರನ್ನು ರಕ್ಷಕನೆಂದು** ಮತ್ತು ಅದೇ ಸಮಯದಲ್ಲಿ ಆತನನ್ನು ನ್ಯಾಯಾಧಿಪತಿ ಎಂದು ಹೇಳುವದರಲ್ಲಿ ಯಾವ ಸಮಸ್ಯೆಯೂ ಇಲ್ಲ (ವಚನ 4). ದೇವರು ನ್ಯಾಯಾಧಿಪತಿಯಾಗಿದ್ದಲ್ಲಿ, ಯೇಸು ಸಹ ನ್ಯಾಯಾಧಿಪತಿಯಾಗಿದ್ದಾನೆ. ಇದು ವಚನ 15ರಲ್ಲಿ ಸೇರ್ಪಡೆಯಾಗಿದೆ. ಯೂದನು **ಯೇಸು ಕ್ರಿಸ್ತನನ್ನು** ಮತ್ತು ದೇವರನ್ನು ಸಮಾನ ಮಹಿಮೆಯನ್ನು ಹೊಂದಿದವರಾಗಿ ಯೋಚಿಸುತ್ತಾನೆ. ಕ್ರೈಸ್ತ ನಂಬಿಕೆ ಅದು ಕ್ರಿಸ್ತ ಕೇಂದ್ರಿ ಕೃತ. ಎಲ್ಲಾ ದಾನಧರ್ಮ, ಎಲ್ಲಾ ಒಳ್ಳೇತನ, **ಎಲ್ಲಾ ಮೌಲ್ಯಗಳು, ಎಲ್ಲಾ ಆರಾಧನೆ, ಎಲ್ಲಾ ಅಧಿಕಾರಗಳು** ದೇವರಿಗೆ ಸಲ್ಲಲಿ ಆಮೇನ್.

## ಅಳವಡಿಸುವಿಕೆ

### ಕರ್ತನಿಗಾಗಿ ಕಾದಿರುವದು (ವಚನ 21)

ಅನೇಕ ವರ್ಷಗಳಿಂದ Annie May Alston Lewis ರವರು ಟೆನಿಸ್ಸಿಸ್ ಮೇಂಫಿ ನಲ್ಲಿರುವ ಹಾರ್ಡಿಂಗ್ ವಿಶ್ವವಿದ್ಯಾಲಯದ ಧಾರ್ಮಿಕ ಪದವಿ ಶಾಲೆಯಲ್ಲಿ ಗ್ರಂಥಲಾಯ ಪಾಲಕರಾಗಿದ್ದರು. ಅವರು ಗ್ರಂಥಲಯವನ್ನು ಪ್ರೀತಿಸುತ್ತಿದ್ದರು ಮತ್ತು ಅವರು ತಮ್ಮ ವರ್ಗದಲ್ಲಿ ಬರುವ ವಿದ್ಯಾರ್ಥಿಗಳನ್ನು ಪ್ರೀತಿಸುತ್ತಿದ್ದರು. Annie May ರವರು ತಮ್ಮ ವಿದ್ಯಾರ್ಥಿಗಳಿಗೆ 130ನೇ ಕೀರ್ತನೆಯನ್ನು ಪ್ರೀತಿಸಲು ಕಲಿಸಿದ್ದರು. ಆ ಕೀರ್ತನೆಯ 6ನೇ ವಚನ ಹೀಗೆ ಹೇಳುತ್ತದೆ, "ಕಾವಲುಗಾರರು ಬೆಳಗಾಗುವದನ್ನು ಮುನ್ನೋಡುವದಕ್ಕಿಂತ ವಿಶೇಷವಾಗಿ ನನ್ನ ಅಂತರಾತ್ಮವು ಕರ್ತನನ್ನು ಮುನ್ನೋಡುತ್ತದೆ." ಕೀರ್ತನೆ 130 ತಮ್ಮ ಅಚ್ಚುಮೆಚ್ಚಿನ ಸಾಮ್ಯ ವೆಂದು ಹೇಳುವದಕ್ಕೆ Annie May ರವರು ನಾಚಿಕೆಪಟ್ಟಿಕೊಳ್ಳುತ್ತಿರಲಿಲ್ಲ. ಅವರು ಮಾರ್ಚ್ 9, 2006ರಂದು ಈ ಲೋಕದ ಪ್ರಯಾಣವನ್ನು ಮುಗಿಸಿದರು. ಅವರ ಮಾರ್ಗದಲ್ಲಿ ಹಾದು ಬಂದಿರುವ ನಾವೆಲ್ಲರೂ ಅವರನ್ನು ಬೇಗನೇ ಮರೆಯಲು ಸಾಧ್ಯವಿಲ್ಲ. ನಾವು ಅವರನ್ನು ಜ್ಞಾಪಕದಲ್ಲಿಟ್ಟುಕೊಳ್ಳುತ್ತೇವೆ ಮತ್ತು ನಾವು ಕಾದಿರುತ್ತೇವೆ. ನಾವು ಸ್ವಲ್ಪ ಹೆಚ್ಚು ದೃಢನಿರ್ಧಾರದಿಂದ ಮತ್ತು ತಾಳ್ಮೆಯಿಂದ ನಾವು ಈ ಹಿಂದೆ ಮಾಡಿರುವದಕ್ಕಿಂತ ಹೆಚ್ಚಾಗಿ ಎದುರುನೋಡುತ್ತೇವೆ ಯಾಕೆಂದರೆ ಅವಳು ನಮ್ಮನ್ನು ಕೀರ್ತನೆ 130 ರೆಡೆಗೆ ನಡೆಸಿದ್ದಾರೆ.

ನಾನು ತಾಳ್ಮೆಯಿಲ್ಲದ ಆತ್ಮ ಎಂಬುದನ್ನು ನಾನು ಇಲ್ಲಿ ಅರಿಕೆ ಮಾಡಬೇಕು. ಯಾರಿಗಾದರು ನನಗೆ ಬಹಳ ಕಠಿಣವಾದ ಕಾರ್ಯವಾಗಿದೆ. ಕರ್ತನಿಗಾಗಿ ಕಾದಿರುವದು ನನಗೆ ಕಠಿಣವಾಗಿದೆ. ನಾನು ಕಾದಿರುವಾಗ ಆತನು ನಾನು ನಿರೀಕ್ಷಿಸದೇ ಇರುವ ಮಾರ್ಗದಲ್ಲಿ ತನ್ನ ಉದ್ದೇಶವನ್ನು ನನಗೆ ತಿಳಿಯಪಡಿಸುತ್ತಾನೆ. ಅವನು ಅದನ್ನು ನನ್ನದಲ್ಲದ ವೇಳಾಪಟ್ಟಿಯಲ್ಲಿ ತರುತ್ತಾನೆ. ಯೂದನಂತೆ ನಾವು ವ್ಯಾಕುಲತೆಯಿಂದ ಎದುರುನೋಡುತ್ತಾ ಇದ್ದೇವೆ. ಭವಿಷ್ಯತ್ತು ಅನಿಶ್ಚಿತವಾಗಿದೆ. ಕಾರ್ಯವನ್ನು ಮಾಡಿ ಮುಗಿಸಬೇಕಾಗಿದೆ. ನಾವು ಪ್ರೀತಿಸಬೇಕಾದ ಮತ್ತು ಬದಲಾಯಿಸಬೇಕಾದ ಜನರಿದ್ದಾರೆ. ನಾವು ಸಹಿಸಬೇಕಾದ ಕಷ್ಟಾನುಭವವಿದೆ. ವೇದನೆ ನಮ್ಮ ಸಮೀಪದಲ್ಲಿದೆ. ನಾವು ವಿದಾಯವನ್ನು ಹೇಳಬೇಕಾದ ಜನರಿದ್ದಾರೆ. ಇವೆಲ್ಲವೂ ದೇವರ ಸಮಯದಲ್ಲಿ ನೆರವೇರುತ್ತದೆ. ನಾವು ನಮ್ಮನ್ನು ಆತನ ಹಸ್ತದಲ್ಲಿ ಇಡುತ್ತೇವೆ ಮತ್ತು ನಾವು ವ್ಯಾಕುಲತೆಯಿಂದ ಕಾಯುತ್ತೇವೆ.

"ವ್ಯಾಕುಲತೆಯಿಂದ ಎದುರುನೋಡುವದು" ಕನಿಷ್ಟ ಎರಡು ಅರ್ಥೈಸುವಿಕೆಯಲ್ಲಿ ವಿಷಯವಸ್ತುವಾಗಿದೆ. ಒಬ್ಬನು ವ್ಯಾಕುಲತೆಯ ಬಯಕೆಯಿಂದ ಕಾಯ್ದಿರಬಹುದು. ಒಬ್ಬನು ಮಗು ಕ್ರಿಸ್ತ ಜಯಂತಿಗಾಗಿ ಕಾದಿರುವಂತೆ ಕಾದಿರಬಹುದು. ಹಾಗೂ, ವ್ಯಾಕುಲತೆಯಿಂದ ಕಾಯ್ದಿರುವದು ಇನ್ನೊಂದು ಅರ್ಥವನ್ನು ನೀಡುತ್ತದೆ. ವ್ಯಾಕುಲತೆ ಎಂದರೆ ಅನಿಶ್ಚಿತತೆ ಎಂಬ ಅರ್ಥವನ್ನು ನೀಡಬಹುದು. ವ್ಯಾಕುಲರಾಗಿರುವದು ಬಹಳ ಭಯಹುಟ್ಟಿಸುವ, ತಿಳಿಯದೇ ಇರುವ ಸಂಗತಿಯ ಕುರಿತಾದ ಭಯವಿರಬಹುದು. ಯೂದನು ನಾವು ವ್ಯಾಕುಲತೆಯಿಂದ

ಕಾಯ್ದಿರುತ್ತೇವೆ ಎಂದು ಹೇಳುವಾಗ ಹಿಂದಿನ ಭಾವನೆಯಲ್ಲಿ ಆತನು ಉದ್ದೇಶಪೂರ್ವಕವಾಗಿ ಪದವನ್ನು ಉಪಯೋಗಿಸಿದ್ದಾನೆ. ಕ್ರೈಸ್ತರು ಕ್ರಿಸ್ತನ ಬರೋಣಕ್ಕಾಗಿ ವ್ಯಾಕುಲರಾಗಿದ್ದಾರೆ, ಆತನ ಬರೋಣದ ಕುರಿತಾಗಿ ಅಲ್ಲ.

---

ಟಿಪ್ಪಣೆಗಳು

[1]ಪದವು 1 ಕೊರಿಂಥ 2:14; 15:44, 46; ಮತ್ತು ಯಾಕೋಬ 3:15ರಲ್ಲಿ ಕಂಡುಬರುತ್ತದೆ. Walter Bauer ರವರ ಪ್ರಕಾರ ಪದವು "ಸ್ವಾಭಾವಿಕ ಲೋಕದ ಜೀವನ ಮತ್ತು ಅದಕ್ಕೆ ಸಂಬಂಧಿಸಿದ್ದೆಲ್ಲದಕ್ಕೆ, ಈ ಅನುಭವದ ಕ್ಷೇತ್ರಕ್ಕೆ ಭಿನ್ನವಾಗಿ ಯಾರ ಮಹತ್ವದ ಗುಣಲಕ್ಷಣ ಆತ್ಮವಾಗಿದೆಯೋ" ಅದಕ್ಕೆ ಸೇರಿದೆ. (Walter Bauer, *A Greek-English Lexicon of the New Testament and other Early Christian Literature,* 3rd ed., rev. and ed. Frederick William Danker [Chicago, University of Chicago Press, 2000], 1100.) [2]"ಶಾಶ್ವತ" *aiōnios,* ಎಂಬ ಪದ "ಯುಗ" ಎಂಬ ನಾಮಪದದ ಕ್ರಿಯಾವಿಶೇಷಣವಾಗಿದೆ. ಹೀಗೆ "ಶಾಶ್ವತ" ಎಂಬ ಪದದ ಸರಿಯಾದ ಅರ್ಥ "ಬರಲಿಕ್ಕಿರುವ ಯುಗದ ಗುಣಲಕ್ಷಣ." ವಿಶ್ವಾಸಿಯು ದೀಕ್ಷಾಸ್ನಾನದ ಮೂಲಕ ಕ್ರಿಸ್ತನನ್ನು ಧರಿಸಿಕೊಂಡಾಗ ಬರಲಿಕ್ಕಿರುವ ಯುಗದಲ್ಲಿ ಅನುಭವಿಸಬಹುದಾದ ಜೀವಿತಕ್ಕೆ ಹೇಗೋ ಬಾಧ್ಯಸ್ತನಾದ ಹಾಗೆ.